ಸಾಕ್ಷಿಗೆ ದಿನಾಂಕ 19.08.2026 ರಂದು ಪ್ರಮಾಣವಚನ ಭೋಧಿಸಲಾಗಿದೆ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ :</u>**

11. ನನಗೆ ಓದು ಬರಹ ಬರುವುದಿಲ್ಲ. ದೂರಿನಲ್ಲಿ ಏನು ಬರೆಯಲಾಗಿದೆ ಎಂಬುದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ದೂರನ್ನು ಕೊಟ್ಟ ನಂತರ ನನ್ನ ಹೇಳಿಕೆಯನ್ನು ಪಡೆದಿರುವುದಿಲ್ಲ. ಪೋಲಿಸರು ದೂರು ಕೊಟ್ಟ ನಂತರ ಪಂಚನಾಮೆಯನ್ನು ಮಾಡಿದ್ದಾರೆ. ನಾನು ದೂರನ್ನು ಕೊಟ್ಟ ಎರಡು ದಿನಗಳ ನಂತರ ಪೋಲಿಸರು ಪಂಚನಾಮೆ ಮಾಡಲು ಬಂದಿದ್ದರು. ಆ ದಿನ ಯಾವ-ಯಾವ ಪಂಚನಾಮೆಗಳನ್ನು ಮಾಡಿದ್ದಾರೆ ಎಂಬುದು ನನಗೆ ಗೊತ್ತಾಗುವುದಿಲ್ಲ. ಪಂಚನಾಮೆಗಳಲ್ಲಿ ಏನು ಬರೆಲಾಗಿದೆ ಎಂಬುದು ನನಗೆ ಗೊತ್ತಿರುವುದಿಲ್ಲ.

12. ನನ್ನ ಮತ್ತು ಇಬ್ಬರು ಆರೋಪಿತರ ಮಧ್ಯದಲ್ಲಿ ಈ ಕೇಸು ದಾಖಲಾಗುವ ಪೂರ್ವದಲ್ಲಿ ಜಗಳ ಇತ್ತು ಅಂದರೆ ಸರಿಯಲ್ಲ. ಆ ಜಗಳ ಮಾನ್ವಿಯ ಅಂಜನೇಯ ದೇವಸ್ಥಾನದ ಜಾತ್ರೆಯಲ್ಲಿ ಆಗಿತ್ತು ಅಂದರೆ ಸರಿಯಲ್ಲ. ನನ್ನ ಸಹೋದರ ಅಮರಮ್ಮ ಇವಳ ಇಚ್ಛೆಗೆ ವಿರುದ್ದವಾಗಿ ಅವಳ ಮದುವೆಯನ್ನು ಅಮರೇಶ ಈತನೊಂದಿಗೆ ಮಾಡಲಾಗಿತ್ತು ಅಂದರೆ ಸರಿಯಲ್ಲ. ಅವಳು ಗಂಡನ ಮನೆಗೆ ಹೋಗದೆ ನನ್ನ ಮನೆಯಲ್ಲಿ ವಾಸವಿದ್ದಳು ಅಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ಅಮರಮ್ಮ ಇವಳನ್ನು ಬಡಿದು ಗಂಡನ ಮನೆಗೆ ಕಳುಹಿಸಿದ್ದೆವು ಅಂದರೆ ಸರಿಯಲ್ಲ. ಈ ಕಾರಣಕ್ಕಾಗಿ ಅಮರಮ್ಮ ಮರಣಹೊಂದಿದ್ದಾಳೆ ಅಂದರೆ ಸರಿಯಲ್ಲ.

13. ಅಮರೇಶ ಈತನು ನನಗೆ ಅಮರಮ್ಮ ಇವಳ ಕುರಿತು ಯಾವುದೇ ಸಂಗತಿಗಳನ್ನು ತಿಳಿಸಿರಲಿಲ್ಲ ಅಂದರೆ ಸರಿ. ಅಂಜನೇಯ ದೇವಸ್ಥಾನದ ಜಾತ್ರೆಯಲ್ಲಿ ಆದ ಜಗಳದ ದ್ವೇಷದಿಂದಾಗಿ ನಾನು ಆರೋಪಿತರ ವಿರುದ್ದ ಸುಳ್ಳು ದೂರನ್ನು

ಕೊಟ್ಟಿದ್ದೇನೆಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಬಿ.ಬಿ.ಜಕಾತಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮತ್ತು
C/c ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.